■ ಹನಿ



## ಬಂಗಾರದ ಬಾಲೆ

ಎಲ್‌ಕೆಜಿ ಯಲ್ಲಿದ್ದಾಗ ಈ ಪುಟ್ಟ ಬಾಲೆಯ ಕೈ, ಕಾಲುಗಳು ಉಳಿದ ಮಕ್ಕಳದ್ದಕ್ಕಿಂತ ಹೆಚ್ಚು ಉದ್ದ ಇರುವುದನ್ನು ಕಂಡು ಟೀಚರ್‌ಗೆ ತುಂಬ ಅಚ್ಚರಿ ಆಯಿತಂತೆ! 'ಈಕೆಯನ್ನು ಈಜು ತರಬೇತಿಗೆ ಸೇರಿಸಿ' ಎಂದು ಪೋಷಕರಿಗೆ ಸೂಚಿಸಿದಳಂತೆ. ಅಲ್ಲಿಂದಲೇ ಶುರುವಾಯ್ತು ತರಬೇತಿ. ಈಗ ಲಂಡನ್ ಒಲಿಂಪಿಕ್ಸ್‌ನ ಈಜುಕೊಳದಲ್ಲಿ ಇನ್ನೂ 16ರ ಹರೆಯದ ಈ ಹೈಸ್ಕೂಲ್ ಹುಡುಗಿ ಯೆ ಶಿವೆನ್, 200 ಮೀಟರ್ ಮತ್ತು 400 ಮೀಟರ್ ವೈಯಕ್ತಿಕ ಮೆಡ್ಲೇಗಳಲ್ಲಿ ಎರಡು ಚಿನ್ನದ ಪದಕಗಳನ್ನು ದೋಚಿದ್ದನ್ನು ನೋಡಿ ಎಲ್ಲರೂ ಬೆರಗಾಗಿದ್ದಾರೆ. 400 ಮೀಟರ್ ಮೆಡ್ಲೇಯಲ್ಲಂತೂ ಕೊನೆಯ 50 ಮೀಟರ್‌ನಲ್ಲಿ ಈಕೆಯ ಈಜಿನ ವೇಗ ಎಷ್ಟಿತ್ತೆಂದರೆ, ಪುರುಷರ ವಿಭಾಗದ ವಿಶ್ವ ಚಾಂಪಿಯನ್ ಅಮೆರಿಕನ್ ಈಜುಗಾರ ರ್‍ಯಾನ್ ಲೋಚೆಯ ವೇಗಕ್ಕೆ ಸಮವಾಗಿತ್ತಂತೆ! ಒಟ್ಟಾರೆ ದೂರವನ್ನು ಈಕೆ ಈಜಿ ಕ್ರಮಿಸಿದ ಒಟ್ಟು ಸಮಯದಲ್ಲೂ ಈಕೆ ಲೋಚೆಗಿಂತ ಕೇವಲ 23 ಸೆಕೆಂಡ್ ಹಿಂದಿದ್ದಾಳೆ ಅಷ್ಟೆ! 'ಇನ್ನೂ 16ರ ಹರೆಯದ ಈ ಹುಡುಗಿ ಹೀಗೆ ವಿಶ್ವ ಚಾಂಪಿಯನ್ ಪುರುಷರಿಗಿಂತ ವೇಗವಾಗಿ ಈಜಬೇಕಾದರೆ ಈಕೆ ಉದ್ದೀಪನಾ ಮದ್ದು ಸೇವಿಸಿರಬೇಕು' ಎಂದು ಅಮೆರಿಕದ ಮಾಧ್ಯಮಗಳು ಗುಲ್ಲೆಬ್ಬಿಸಿವೆ. 'ಅಮೆರಿಕದ ಸ್ಪರ್ಧಿಯೊಬ್ಬ ಐದಾರು ಚಿನ್ನ ಗೆದ್ದಾಗ ನಿಮಗೆ ಅನುಮಾನವೇ ಬರುವುದಿಲ್ಲ. ನಾನು ಚೀನಾದವಳು 2 ಚಿನ್ನ ಗೆದ್ದಾಕ್ಷಣ ನಿಮಗೆ ಡೋಪಿಂಗ್ ಅನುಮಾನ ಬರುತ್ತದೆಯೆ?' ಎಂದು ಯೆ ಶಿವೆನ್ ಕಿಡಿ ಕಾರಿದ್ದಾಳೆ. 'ಒಲಿಂಪಿಕ್ಸ್‌ಗೆ ಬರುವ ಮುನ್ನ ಚೀನಾದಲ್ಲಿ ಪ್ರತಿ ಸ್ಪರ್ಧಿಗೂ ಸುಮಾರು 100ರಷ್ಟು ಉದ್ದೀಪನಾ ಮದ್ದು ಪರೀಕ್ಷೆಗಳು ನಡೆಯುತ್ತವೆ' ಎಂದು ಚೀನಾದ ಅಧಿಕಾರಿಗಳು ಹೇಳಿದ್ದಾರೆ. ಅಮೆರಿಕನ್ ಮಾಧ್ಯಮದ ಆಪಾದನೆಗಳನ್ನು ತಳ್ಳಿ ಹಾಕಿರುವ ಬ್ರಿಟನ್ನಿನ ಟೂರ್ನಿ ಸಂಘಟಕರು, 'ವಾಡಾ ಡೋಪಿಂಗ್ ಟೆಸ್ಟ್‌ನಲ್ಲಿ ಪಾಸಾದ ಬಳಿಕವೇ ಎಲ್ಲರಿಗೂ ಸ್ಪರ್ಧೆಗೆ ಪ್ರವೇಶ ನೀಡಿರುವುದು. ಅವೆಲ್ಲ ತರಲೆ ಬೇಡ' ಎಂದಿದ್ದಾರೆ.

ಚೀನಾದ ಹಾಂಗ್ಝೊ ಎಂಬ ಊರಿನ ಯೆ ಶಿವೆನ್‌ನ ತಂದೆ ಮತ್ತು ತಾಯಿ ಧೋಬಿ ಕಂಪೆನಿಯೊಂದರ ಉದ್ಯೋಗಿಗಳು. ತಂದೆ ಓಟದ ಸ್ಪರ್ಧೆಯಲ್ಲಿ ಗೆದ್ದದ್ದುಂಟು. ತಾಯಿ ಲಾಂಗ್ ಜಂಪ್‌ನಲ್ಲಿ ಪದಕ ಗೆದ್ದಿದ್ದಳು. ಆದರೆ ಅವೆಲ್ಲ ಶಾಲೆಯ ದಿನಗಳಲ್ಲಿ. ಆ ಬಳಿಕ ಹೊಟ್ಟೆಪಾಡಿಗೆ ಗಮನ ಕೊಟ್ಟರು. ಈಗ ಮಗಳು ಒಲಿಂಪಿಕ್ಸ್‌ನಲ್ಲಿ ವಿಶ್ವದಾಖಲೆ ಬರೆಯುವ ಮೂಲಕ ಪೋಷಕರಲ್ಲಿ ಹೆಮ್ಮೆ ಮೂಡಿಸಿದ್ದಾಳೆ. ಒಲಿಂಪಿಕ್ಸ್‌ನ ಮೊದಲ ವಾರದಲ್ಲಿ ಚೀನಾದ ಪತ್ರಿಕೆಗಳಲ್ಲಿ ಯೆ ಶಿವೆನ್‌ಳದ್ದೇ ಸುದ್ದಿ.

5 ಅಡಿ 7 ಇಂಚು ಎತ್ತರದ, 64 ಕೇಜಿ ತೂಕದ ಈ ಚಿನ್ನದ ಬಾಲೆ, ಕಳೆದ 9 ವರ್ಷಗಳಲ್ಲಿ ಎಡೆಬಿಡದೆ ಪ್ರತೀ ದಿನ 5 ಗಂಟೆಗಳ ಕಾಲ ಈಜುಕೊಳದಲ್ಲೇ ಅಭ್ಯಾಸ ನಿರತಳಾಗಿದ್ದಳಂತೆ. ಒಲಿಂಪಿಕ್ಸ್ ಸಲುವಾಗಿಯೇ ಕಳೆದ ಕೆಲವು ತಿಂಗಳಿಂದ ಆಸ್ಟ್ರೇಲಿಯಾದಲ್ಲಿ ತರಬೇತಿ ಪಡೆಯುತ್ತಿದ್ದಳು. ಈಕೆ ವಿಶ್ವದಾಖಲೆ ಮುರಿದದ್ದು ಇದೇ ಮೊದಲಲ್ಲ. 2010ರಲ್ಲಿ ಏಷ್ಯನ್ ಗೇಮ್ಸ್‌ನಲ್ಲೂ ಈಕೆ 200 ಮತ್ತು 400 ಮೀಟರ್ ಮೆಡ್ಲೇನಲ್ಲಿ ಚಿನ್ನ ಗೆದ್ದಾಗಲೂ ದಾಖಲೆ ಬರೆದವಳು. ಆ ಬಳಿಕ 2012ರ ಸಮ್ಮರ್ ಒಲಿಂಪಿಕ್ಸ್‌ನಲ್ಲಿ ದಾಖಲೆ ಬರೆದಾಗ ಈಕೆಯ ವೇಗ ನೋಡಿ ನಂಬಲಾಗದವರು 'ಉದ್ದೀಪನಾ ಮದ್ದಿನ' ಆರೋಪ ಮಾಡಿದ್ದರು. 'ಇದ್ಯಾವುದೂ ನನ್ನ ಡಿಸ್ಟರ್ಬ್ ಮಾಡೋದಿಲ್ಲ. ನಾನು ಸಾಧನೆ ಮಾಡಿ ಮೇಲೆ ಬಂದಿದ್ದೇನೆ' ಎನ್ನುವುದು ಯೆ ಶಿವೆನ್ ಸ್ಪಷ್ಟೋಕ್ತಿ. ಇದನ್ನು ಬರೆಯುವಾಗ ಇನ್ನೂ ಕೆಲವು ಸ್ಪರ್ಧೆಗಳು ಬಾಕಿ ಉಳಿದಿವೆ. ಇದನ್ನು ಓದುವ ಹೊತ್ತಿಗೆ ಈಕೆ ಇನ್ನೆಷ್ಟು ಚಿನ್ನ ಗೆದ್ದಿರುತ್ತಾಳೋ?

## ಶೇಖರ್ 'ಪಾನಿ' ಕಪೂರ್



ಶೇಖರ್ ಕಪೂರ್ ಈಗ ಚಿತ್ರೋದ್ಯಮದಲ್ಲಿ ಅಂತರರಾಷ್ಟ್ರೀಯ ಹೆಸರು. ರಾಣಿ 'ಎಲಿಜಬೆತ್' ಕುರಿತ ಸಿನಿಮಾ ಈ ನಿರ್ದೇಶಕನಿಗೆ ತಂದು ಕೊಟ್ಟ ಕೀರ್ತಿ ಅಪಾರ. ಮಾಸೂಮ್, ಮಿಸ್ಟರ್ ಇಂಡಿಯಾ, ಬ್ಯಾಂಡಿಟ್ ಕ್ವೀನ್ ಮುಂತಾದ ಚಿತ್ರಗಳು ಈ ನಿರ್ದೇಶಕನ ಪ್ರತಿಭೆಯನ್ನು ಎತ್ತಿ ತೋರಿದಂತೆಯೇ ಭಾರೀ ಖ್ಯಾತಿಯನ್ನೂ ತಂದುಕೊಟ್ಟವು. ಸಾಂಪ್ರದಾಯಿಕವಾಗಿ ನಿರ್ದೇಶನ ಕಲಿಯದ ಶೇಖರ್, ತನ್ನ 'ಮೇಕಿಂಗ್' ವಿಧಾನದಿಂದಲೇ ಹೆಚ್ಚು ಪ್ರಸಿದ್ಧಿ ಪಡೆದಾತ.

ಆದರೆ ಶೇಖರ್ ಕಪೂರ್ ಪೂರ್ತಿಗೊಳಿಸಿದ್ದಕ್ಕಿಂತ ಅರ್ಧದಲ್ಲಿ ಕೈ ಬಿಟ್ಟ ಯೋಜನೆಗಳ ಸಂಖ್ಯೆಯೇ ಹೆಚ್ಚಿದೆ ಎನ್ನುವುದು ಒಂದು ಚೋದ್ಯ. ಭಾರತದಲ್ಲಿ ನೀರಿನ ಸಮಸ್ಯೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ಹೊಸದೊಂದು ಮೆಗಾ ಸಿನಿಮಾ 'ಪಾನಿ'ಯನ್ನು ನಿರ್ಮಿಸುವ ಕುರಿತು ಶೇಖರ್ ಕಪೂರ್ ಪ್ರಕಟಿಸಿ ಆಗಲೇ ಎರಡು ವರ್ಷಗಳಾಗಿವೆ. ಈ ಸಿನಿಮಾಕ್ಕೆ ಸ್ಫೂರ್ತಿ ನಮ್ಮ ವಿಜಾಪುರದಲ್ಲಿ ನಡೆದ ನೀರಿನ ಹೋರಾಟ ಎನ್ನುವುದನ್ನೂ ಬಹಿರಂಗಪಡಿಸಿದ್ದರಿಂದ ಕನ್ನಡಿಗರಲ್ಲಿ ಸಾಕಷ್ಟು ಕುತೂಹಲ ಕೆರಳಿತ್ತು. ಆದರೆ ಈಗ ಬಂದಿರುವ ಸುದ್ದಿಯ ಪ್ರಕಾರ, ಆ ಯೋಜನೆ ಇನ್ನಷ್ಟು ಹಿಂದಕ್ಕೆ ಹೋಗಿದೆ. 'ಸದ್ಯಕ್ಕೆ ವಿಕಿ ಡೋನರ್ ಚಿತ್ರಕ್ಕೆ ಕಥೆ ಬರೆದ ಜೂಹಿ ಚತುರ್ವೇದಿ ಬರೆಯುತ್ತಿರುವ ಇನ್ನೊಂದು ಕಥೆಯನ್ನು ನಿರ್ದೇಶಿಸುತ್ತೇನೆ. ಆ ಬಳಿಕ ಪಾನಿ' ಎಂದಿದ್ದಾರೆ ಕಪೂರ್.

ಈ ಕಪೂರ್ ಅರ್ಧಕ್ಕೆ ಕೈಬಿಟ್ಟ ಯೋಜನೆಗಳ ಪಟ್ಟಿ ದೊಡ್ಡದಿದೆ. ಬಹಳ ಹಿಂದೆ ಈತ ನಿರ್ದೇಶಿಸಿದ ಅಮೀರ್ ಖಾನ್– ರವೀನಾ ನಟಿಸಿದ್ದ 'ಟೈಮ್ ಮೆಶಿನ್' ಎಂಬ ಸಿನಿಮಾ ಅರ್ಧಕ್ಕೇ ನಿಂತಿತು. 'ಬುದ್ಧ' ಎನ್ನುವ ಸಿನಿಮಾ ಆರಂಭವೇ ಆಗಲಿಲ್ಲ. ಫಿಲಿಪ್ ರೀವ್‌ನ 'ಲಾರ್ಕ್ ಲೈಟ್' ಆಧರಿತ ಸಿನಿಮಾ ಕೂಡಾ ಕೈಬಿಟ್ಟ. ಐಸಾಕ್ ಅಸಿಮೊವ್‌ನ 'ಫೌಂಡೇಶನ್ ಟ್ರಯಾಲಜಿ' ಆಧರಿತ ಸಿನಿಮಾ ಕೂಡಾ ಸೆಟ್ಟೇರಲಿಲ್ಲ. 'ಪಾನಿ' ಗೆ ಹಾಗಾಗದಿರಲಿ. ಲಂಡನ್ನಿನಲ್ಲಿ ಒಂದು ಕಾಲದಲ್ಲಿ ಅಕೌಂಟೆಂಟ್ ಆಗಿದ್ದು, ಅದನ್ನು ಬಿಟ್ಟು ಬಾಲಿವುಡ್‌ಗೆ ಮರಳಿದ ಶೇಖರ್ ಪ್ರತಿಭೆಗೆ ವೇಗವರ್ಧಕ ದೊರಕಲಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. **Editor: K.N. TILAK KUMAR.**
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65